# ಕರ್ನಾಟಕ ವೈದ್ಯಕೀಯ, ದಂತವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ (ವಿಶೇಷ ಉಪಬಂಧಗಳು) ಅಧಿನಿಯಮ, 2004

## ಪ್ರಕರಣಗಳ ಪಟ್ಟಿ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ಸರ್ಕಾರಿ ಸೀಟುಗಳು ಹಾಗೂ ಆಡಳಿತ ಮಂಡಳಿ ಸೀಟುಗಳ ಸಂಬಂಧದಲ್ಲಿ ಸೀಟುಗಳ ಹಂಚಿಕೆ
4. ಆಡಳಿತ ಮಂಡಳಿಯ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಭರ್ತಿ ಮಾಡತಕ್ಕದ್ದು
5. ಸರ್ಕಾರಿ ಸೀಟುಗಳಿಗೆ ಅನ್ವಯವಾಗುವ ಮೀಸಲಾತಿ
6. 2004-05ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗಾಗಿ ನಿಗದಿಪಡಿಸಿದ ಶುಲ್ಕ
7. ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳು ಅಸಿಂಧುವಾಗಿರುವುದು
8. ದಂಡಗಳು
9. ಅಪರಾಧಗಳ ಸಂಜ್ಞಾನ
10. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
11. ತೊಂದರೆಗಳ ನಿವಾರಣೆ
12. ನಿಯಮ ರಚನಾಧಿಕಾರ
13. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ನಿಯಮಗಳು, 2004ರ ಅನ್ವಯತೆ


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ವೋಚ್ಚ ನ್ಯಾಯಾಲಯವು ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಶನ್ ಮತ್ತು ಇತರರು-ವಿರುದ್ಧ-ಕರ್ನಾಟಕ ರಾಜ್ಯ ಈ ಪ್ರಕರಣದಲ್ಲಿ ಕೊಟ್ಟ ತನ್ನ ತೀರ್ಪಿನಲ್ಲಿ, ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶವನ್ನು ಸಂಸತ್ತು ಆ ಬಗ್ಗೆ ಸೂಕ್ತ ಕಾನೂನನ್ನು ಅಧಿನಿಯಮವಾಗಿ ತರುವವರೆಗೆ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಗಳ ಮೇಲ್ವಿಚಾರಣೆ ನಡೆಸಲು ಒಂದು ಸಮಿತಿ ಹಾಗೂ ಶುಲ್ಕ ವ್ಯವಸ್ಥೆಯನ್ನು ಅನುಮೋದಿಸಲು ಇನ್ನೊಂದು ಸಮಿತಿ ಹೀಗೆ ಎರಡು ನ್ಯಾಯಿಕ ಸಮಿತಿಗಳ ಮೂಲಕ ನಿಯಂತ್ರಿಸಲು ಪ್ರಯತ್ನಿಸಿದೆ. ಈ ನಿರ್ದೇಶನಗಳು ನಾಡಿನ ಕಾನೂನುಗಳಾಗಿರತಕ್ಕದ್ದೆಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸಿದೆ. ರಾಜ್ಯ ವೃತ್ತಿ ಶಿಕ್ಷಣ ಕಾಲೇಜುಗಳ ಪ್ರವೇಶದ ಮೇಲ್ವಿಚಾರಣೆಯನ್ನು ನಡೆಸುವುದಕ್ಕಾಗಿ ನ್ಯಾಯಮೂರ್ತಿ ಎಸ್. ವೆಂಕಟರಾಮನ್ ಸಮಿತಿಯನ್ನು ಮತ್ತು ಶುಲ್ಕ ಸ್ವರೂಪವನ್ನು ನಿಗದಿಪಡಿಸಲು ನ್ಯಾಯಮೂರ್ತಿ ಎ.ಬಿ. ಮುರುಗೋಡ್ ಸಮಿತಿಯನ್ನು ರಾಜ್ಯ ಸರ್ಕಾರವು ನೇಮಿಸಿತು.

ಟಿ.ಎಂ.ಎ.ಪೈ. ಪ್ರಕರಣದಲ್ಲಿ 11 ನ್ಯಾಯಮೂರ್ತಿಗಳಿದ್ದ ಸರ್ವೋಚ್ಚ ನ್ಯಾಯಾಲಯದ ಪೀಠವು ಸರ್ಕಾರ ಮತ್ತು ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ

ಕಾಲೇಜುಗಳ ಆಡಳಿತ ಮಂಡಳಿಗಳ ನಡುವೆ ಸೀಟುಗಳ ಕೋಟಾ ಅಥವಾ ಸೀಟು ಹಂಚಿಕೆ ಅನುಪಾತವನ್ನು ರಾಜ್ಯಸರ್ಕಾರವೇ ನಿಗದಿಪಡಿಸಬೇಕೆಂದು ನಿರ್ದೇಶಿಸಿದೆ. ರಾಜ್ಯಸರ್ಕಾರವು ಸೂಕ್ತ ಪರ್ಯಾಲೋಚನೆ ನಡೆಸಿದ ತರುವಾಯ ಸರ್ಕಾರ ಮತ್ತು ಆಡಳಿತ ಮಂಡಳಿಗಳ ನಡುವಿನ ಸೀಟು ಹಂಚಿಕೆ ಅನುಪಾತವನ್ನು 75:25 ಅನುಪಾತವಾಗಿ ನಿರ್ಧರಿಸಿದೆ. ಸ್ಥಳೀಯ ಅವಶ್ಯಕತೆಗಳ ನಿರ್ಧರಣೆ ಮಾಡಿ ಮತ್ತು 1994–95ನೇ ಸಾಲಿನಿಂದ ಕಳೆದ ಹತ್ತು ವರ್ಷಗಳಲ್ಲಿ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಕಡೇ ಪಕ್ಷ ಶೇಕಡಾ 75 ರಷ್ಟು ಸೀಟುಗಳನ್ನು ರಾಜ್ಯ ಸಾ.ಪ್ರ.ಪ. ಘಟಕ ತುಂಬಿದೆ ಎಂಬುದನ್ನು ಪರಿಗಣಿಸಿ ಈ ನಿರ್ಧಾರಕ್ಕೆ ಬರಲಾಯಿತು. ರಾಜ್ಯ ಸಾ.ಪ್ರ.ಪ. ಘಟಕಕ್ಕೆ 2004 ರಲ್ಲಿ 1,09,304 ಅರ್ಜಿಗಳನ್ನು ಬಂದಿದ್ದರೆ ಖಾಸಗಿ ವೃತ್ತಿ ಶಿಕ್ಷಣ ಕಾಲೇಜುಗಳ ಸಂಘಕ್ಕೆ 20,072 ಅರ್ಜಿಗಳು ಬಂದಿರುವ ಅಂಶವನ್ನೂ ರಾಜ್ಯಸರ್ಕಾರ ಗಮನಕ್ಕೆ ತಂದುಕೊಂಡಿದೆ. ವೈದ್ಯಕೀಯ, ದಂತವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ದೊರೆಯಲಿರುವ ಒಟ್ಟು ಸೀಟುಗಳ ಸಂಖ್ಯೆ ಅಂದಾಜು 41,000.

ತರುವಾಯ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ನ್ಯಾಯಮೂರ್ತಿ ಎಸ್. ವೆಂಕಟರಾಮನ್ ಸಮಿತಿಗೆ ಅಪೀಲು ಸಲ್ಲಿಸಿತು. ಸಮಿತಿಯು ಎರಡೂ ಕಡೆಯ ವಾದಗಳ ಗುಣಾವಗುಣಗಳನ್ನು ಸವಿವರವಾಗಿ ಪರಿಶೀಲಿಸಿ ಸರ್ಕಾರವು ನಿಗದಿಪಡಿಸಿದ್ದ 75:25 ಅನುಪಾತದ ಸೀಟು ಹಂಚಿಕೆಯನ್ನು ಎತ್ತಿ ಹಿಡಿಯಿತು.

ಸಂಘವು ನ್ಯಾಯಮೂರ್ತಿ ಎಸ್. ವೆಂಕಟರಾಮನ್ ಸಮಿತಿಯ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠದ ಮುಂದೆ ಅಪೀಲು ಸಲ್ಲಿಸಿತು. ಸರ್ವೋಚ್ಚ ನ್ಯಾಯಾಲಯದ ಪೀಠವು 15.7.2004 ರಂದು ಈ ವಿಷಯವನ್ನು ನಿರ್ಣಯಕ್ಕಾಗಿ ಇನ್ನೂ ವಿಶಾಲವಾದ ಪೀಠಕ್ಕೆ ಕಳುಹಿಸಬೇಕೆಂದು ನಿರ್ಣಯಿಸುತ್ತಾ ಪ್ರಕರಣದ ಗುಣಾವಗುಣಗಳ ಬಗ್ಗೆ ಪರಿಶೀಲನೆ ಮಾಡದೆ 50:50 ಕೋಟಾವನ್ನು ನಿಗದಿಪಡಿಸಿ ಮಧ್ಯಂತರ ಆದೇಶವನ್ನು ಹೊರಡಿಸಿತು.

ರಾಜ್ಯ ಸಾ.ಪ್ರ.ಪ. ಘಟಕವು 8.7.2004 ರಂದು 75:25 ಕೋಟಾದ ಆಧಾರದ ಮೇಲೆ ವಿದ್ಯಾರ್ಥಿಗಳ ಕೌನ್ಸಿಲಿಂಗ್ ಪ್ರಾರಂಭಿಸಿತು. 15.7.2004 ರಂದು ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶ ಬಂದ ಕಾರಣ ಸಾ.ಪ್ರ.ಪ. ಘಟಕ ಕೌನ್ಸಿಲಿಂಗ್ ನಿಲ್ಲಿಸಿತು. ಸಂಘವು ಸ್ವೀಕರಿಸಿದ ಅರ್ಜಿಗಳು ಎಲ್ಲಾ ಪ್ರಕರಣಗಳಲ್ಲೂ ಶೇಕಡಾ 50 ರಷ್ಟು ಸೀಟುಗಳನ್ನು ತುಂಬಿಕೊಳ್ಳಲು ಸಾಕಾಗುವಷ್ಟು ಇಲ್ಲ ಎಂಬುದನ್ನು ಸಹ ಗಮನಿಸಲಾಗಿದೆ.

ಆದ್ದರಿಂದ ಟಿ.ಎಂ.ಎ. ಪೈ ಪ್ರಕರಣ ಮತ್ತು ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಶನ್ ಪ್ರಕರಣಗಳಲ್ಲಿ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಿಂದ ಪುರಸ್ಕೃತವಾದ ತನ್ನ ಅಂತರ್‌ನಿಹಿತ ಅಧಿಕಾರಗಳನ್ನು ಚಲಾಯಿಸುತ್ತ ರಾಜ್ಯಸರ್ಕಾರವು ಇಂದಿನ ತುರ್ತು ಅಗತ್ಯಗಳನ್ನು ಪೂರೈಸಲು ಕೋಟಾವನ್ನು ನಿಗದಿಪಡಿಸಲು ನಿರ್ಧರಿಸಿದೆ.

ಎಲ್ಲಾ ವೃತ್ತಿ ಶಿಕ್ಷಣ ಕಾಲೇಜುಗಳ ಶುಲ್ಕವನ್ನು ನಿರ್ಧರಿಸಲು ಸರ್ವೋಚ್ಚ ನ್ಯಾಯಾಲಯದ ಆದೇಶದ ಅಡಿಯಲ್ಲಿ ನೇಮಿಸಲಾದ ನ್ಯಾಯಮೂರ್ತಿ ಎ.ಬಿ. ಮುರುಗೋಡ್ ಸಮಿತಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಶುಲ್ಕವನ್ನು ನಿಗದಿಪಡಿಸಿತ್ತು. ಈ ಶುಲ್ಕವನ್ನು ಉಚ್ಚನ್ಯಾಯಾಲಯದ ಮುಂದೆ 40ಕ್ಕೂ ಹೆಚ್ಚು ಅರ್ಜಿಗಳಲ್ಲಿ ಪ್ರಶ್ನಿಸಲಾಗಿದೆ. ಈ ರಿಟ್ ಅರ್ಜಿಗಳು ಇನ್ನೂ ಇತ್ಯರ್ಥವಾಗಬೇಕಾಗಿವೆ. ಅಷ್ಟರಲ್ಲಿ ನ್ಯಾಯಾಮೂರ್ತಿ ಎ.ಬಿ. ಮುರುಗೋಡ್ ಸಮಿತಿಯು 19.7.2004 ರಂದು ರಾಜಿನಾಮೆ ನೀಡಿದ್ದರಿಂದ ಈ ಅನಿಶ್ಚಿತತೆ ಇನ್ನೂ ಹೆಚ್ಚಾಯಿತು.

ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ-ವಿರುದ್ಧ-ಮಧುಸಿಂಗ್‌ಮತ್ತಿತರರು ಪ್ರಕರಣದಲ್ಲಿ 11.9.2002 ರಂದು ಸರ್ವೋಚ್ಚ ನ್ಯಾಯಾಲಯವು ಕೊಟ್ಟ ಆದೇಶದಲ್ಲಿ ವೈದ್ಯಕೀಯ ಸೀಟುಗಳ ಪ್ರವೇಶಕ್ಕಾಗಿ ಅದು ನಿಗದಿಪಡಿಸಿದ ಕಾಲಮಿತಿಗಳನ್ನು ರಾಜ್ಯಸರ್ಕಾರವು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಶುಲ್ಕವನ್ನು ಕುರಿತಂತೆ, ಅದರಲ್ಲೂ ನ್ಯಾಯಮೂರ್ತಿ ಎ.ಬಿ. ಮುರುಗೋಡ್ ಹಾಗೂ ಸಮಿತಿಯ ಇತರ ಸದಸ್ಯರು ರಾಜೀನಾಮೆ ನೀಡಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಒಂದಿಷ್ಟು ನಿಶ್ಚಿತತೆಯನ್ನು ಒದಗಿಸಬೇಕಾದ ಅಗತ್ಯವೂ ಇದೆ. ರಾಜ್ಯಸರ್ಕಾರವು ಈ ಸಮಸ್ಯೆಯನ್ನು ಬಗೆಹರಿಸಲು, ಅದರಲ್ಲೂ ಶುಲ್ಕವನ್ನು ಕುರಿತು ಒಂದು ಕಾರ್ಯ ಸಾಧ್ಯವಾದಂಥ ಸೂತ್ರವನ್ನು ಕಂಡುಕೊಳ್ಳಲು, ಆಡಳಿತ ಮಂಡಳಿಯ ಪ್ರತಿನಿಧಿಗಳ ಜೊತೆ ಅನೇಕ ಬಾರಿ ಸಭೆ ಸೇರಿತು. ಆದರೆ ಅವು ಫಲಪ್ರದವಾಗಲಿಲ್ಲ.

ಆದ್ದರಿಂದ, ಪ್ರಸಕ್ತ ಶೈಕ್ಷಣಿಕ ವರ್ಷಕ್ಕಾಗಿ ಮಾತ್ರವೇ, ಅಂದರೆ 2004-05ಕ್ಕೆ ಮಾತ್ರವೇ, ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಸೀಟು ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸುವ ಸಲುವಾಗಿ ಒಂದು ವಿಶೇಷ ಕಾನೂನನ್ನು ತರುವುದು ಅವಶ್ಯ ಮತ್ತು ಯುಕ್ತವೆಂದು ಸರ್ಕಾರವು ಪರಿಗಣಿಸುತ್ತದೆ. ಈ ವಿಧೇಯಕದಲ್ಲಿ 75:25 ಕೋಟಾವನ್ನು ಅದು ಸ್ಥಳೀಯ ಅಗತ್ಯಗಳನ್ನು ಆಧರಿಸಿರುವುದರಿಂದ, ನ್ಯಾಯಮೂರ್ತಿ ಎಸ್. ವೆಂಕಟರಾಮನ್‌ರವರು ಎತ್ತಿ ಹಿಡಿದಿರುವುದರಿಂದ ಹಾಗೂ ಅದೇ ಅನುಪಾತದ ಆಧಾರದ ಮೇಲೆ ಕೌನ್ಸಿಲಿಂಗ್ ಈಗಾಗಲೇ ಪ್ರಾರಂಭವಾಗಿರುವುದರಿಂದ ಉಳಿಸಿಕೊಳ್ಳಲಾಗಿದೆ. ನ್ಯಾಯಮೂರ್ತಿ ಎ.ಬಿ. ಮುರುಗೋಡ್ ಶುಲ್ಕ ನಿರ್ಧಾರಣಾ ಸಮಿತಿ ನಿರ್ಧರಿಸಿದ ಶುಲ್ಕವನ್ನೇ ವಿಧಿಸಲು ಈ ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಪರಿವರ್ತನಾ ವರ್ಷದಲ್ಲಿ ಎದುರಿಸುತ್ತಿರುವಂಥ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಕೇವಲ ಒಂದು ತಾತ್ಕಾಲಿಕ ಕ್ರಮವಾಗಿ ಈ ಕಾನೂನನ್ನು ಅಧಿನಿಯಮದ ರೂಪದಲ್ಲಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

(2004ರ ವಿಧಾನಸಭೆಯ ವಿಧೇಯಕ ಸಂಖ್ಯೆ 22)

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಮೂರನೇ ಪಟ್ಟಿಯ 25ನೇ ನಮೂದು)

# 2004ರ ಕರ್ನಾಟಕ ಅಧಿನಿಯಮ ಸಂಖ್ಯೆ 24

(2004ರ ಜುಲೈ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ವೈದ್ಯಕೀಯ, ದಂತವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ (ವಿಶೇಷ ಉಪಬಂಧಗಳು) ಅಧಿನಿಯಮ, 2004

(2004ರ ಜುಲೈ ಮೂವತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯದಲ್ಲಿ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅಭ್ಯರ್ಥಿಗಳ ಆಯ್ಕೆ ಮತ್ತು ಪ್ರವೇಶಕ್ಕಾಗಿ ವಿಶೇಷ ಉಪಬಂಧಗಳನ್ನು ರಚಿಸಲು ಒಂದು ಅಧಿನಿಯಮ.

ಟಿ.ಎಮ್.ಎ.ಪೈ ಪ್ರಕರಣದಲ್ಲಿ ಸಂವಿಧಾನ ಪೀಠವು ನಿರೂಪಿಸಿದ ಸ್ಥೂಲ ತತ್ವಗಳ ಹಾಗೂ ಆ ತರುವಾಯದ ತೀರ್ಪುಗಳ ಬೆಳಕಿನಲ್ಲಿ ರಾಜ್ಯದಲ್ಲಿರುವ ವೃತ್ತಿಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಹಾಗೂ ಅದಕ್ಕೆ ಪ್ರಾಸಂಗಿಕವಾದ ಮತ್ತು ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ, ದಂತವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ (ವಿಶೇಷ ಉಪಬಂಧಗಳು) ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

(3) ಈ ಅಧಿನಿಯಮವು, 2004-05ನೇ ಶೈಕ್ಷಣಿಕ ವರ್ಷಕ್ಕಾಗಿ ವೃತ್ತಿಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆಗೆ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಬಳಸಲಾದ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕ್ಯಾಪಿಟೇಶನ್ ಶುಲ್ಕದ ನಿಷೇಧ) ಅಧಿನಿಯಮ, 1984 (1984ರ ಕರ್ನಾಟಕ ಅಧಿನಿಯಮ 37) ಮತ್ತು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅಭ್ಯರ್ಥಿಗಳ ಪ್ರವೇಶಕ್ಕಾಗಿ ಆಯ್ಕೆ ನಿಯಮಗಳು, 2004 ರಲ್ಲಿ ಗೊತ್ತುಪಡಿಸಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**3. ಸರ್ಕಾರಿ ಸೀಟುಗಳು ಹಾಗೂ ಆಡಳಿತ ಮಂಡಳಿ ಸೀಟುಗಳ ಸಂಬಂಧದಲ್ಲಿ ಸೀಟುಗಳ ಹಂಚಿಕೆ.-** ಸ್ಥಳೀಯ ಅವಶ್ಯಕತೆಗಳಿಗೆ ಗಮನನೀಡಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ, ಸರ್ಕಾರದ ಮತ್ತು ಖಾಸಗಿ ಅನುದಾನಪಡೆದ, ಅನುದಾನಪಡೆಯದ, ಅಲ್ಪಸಂಖ್ಯಾತ ಮತ್ತು ಅಲ್ಪಸಂಖ್ಯಾತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ನಡುವೆ ಸೀಟು ಹಂಚಿಕೆಯು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 812 ದಿನಾಂಕ: 30.7.2004 ರಲ್ಲಿ ಪ್ರಕಟಿತ
ಕಡತ ಸಂಖ್ಯೆ: ಸಂವ್ಯಶಾಇ 31 ಶಾಸನ 2004

(ಎ) ಅನುದಾನಿತ ವೃತ್ತಿ ಶಿಕ್ಷಣ ಸಂಸ್ಥೆಗಳು -

(i) ಸರ್ಕಾರಿ ಸೀಟುಗಳು - ಶೇಕಡಾ ತೊಂಬತ್ತೈದು

(ii) ಆಡಳಿತ ಮಂಡಳಿ ಸೀಟುಗಳು - ಶೇಕಡಾ ಐದು

(ಬಿ) ಅನುದಾನ ಪಡೆಯದ ಅಲ್ಪಸಂಖ್ಯಾತರಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು,-

(i) ಸರ್ಕಾರಿ ಸೀಟುಗಳು - ಶೇಕಡಾ ಎಪ್ಪತ್ತೈದು

(ii) ಆಡಳಿತ ಮಂಡಳಿ ಸೀಟುಗಳು - ಶೇಕಡಾ ಇಪ್ಪತ್ತೈದು

(ಸಿ) ಅನುದಾನ ಪಡೆಯದ ಅಲ್ಪಸಂಖ್ಯಾತರ ವೃತ್ತಿ ಶಿಕ್ಷಣ ಸಂಸ್ಥೆಗಳು,-

(i) ಸರ್ಕಾರಿ ಸೀಟುಗಳು - ಶೇಕಡಾ ಐವತ್ತು

(ii) ಆಡಳಿತ ಮಂಡಳಿ ಸೀಟುಗಳು - ಶೇಕಡಾ ಐವತ್ತು.

4. **ಆಡಳಿತ ಮಂಡಳಿಯ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಭರ್ತಿ ಮಾಡತಕ್ಕದ್ದು.**- ಅಲ್ಪಸಂಖ್ಯಾತರಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಅಲ್ಪಸಂಖ್ಯಾತರ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ಸೀಟುಗಳನ್ನು ರಾಜ್ಯ ಸಾ.ಪ್ರ.ಪ. (ಸಿಇಟಿ) ಘಟಕ ಅಥವಾ ಖಾಸಗಿ ವೃತ್ತಿ ಕಾಲೇಜುಗಳ ಸಂಘವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡತಕ್ಕದ್ದು. ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳ ಸಂಘಗಳು ತಮ್ಮದೇ ಆದ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ನಡೆಸಬಹುದಾಗಿದೆ. ಮೇಲ್ವಿಚಾರಣಾ ಸಮಿತಿಯು ಈ ಸಂಘಗಳು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೇಲ್ವಿಚಾರಣೆ ನಡೆಸಿ ಅದನ್ನು ನ್ಯಾಯಬದ್ಧವಾಗಿ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವಂತೆ ನೋಡಿಕೊಳ್ಳತಕ್ಕದ್ದು.

5. **ಸರ್ಕಾರಿ ಸೀಟುಗಳಿಗೆ ಅನ್ವಯವಾಗುವ ಮೀಸಲಾತಿ.**- ಸೀಟುಗಳ ಮೀಸಲಾತಿಯು, ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ನಿಯಮಗಳು, 2004ರ 14ನೇ ನಿಯಮಕ್ಕನುಸಾರವಾಗಿ ಸರ್ಕಾರಿ ಕೋಟಾದಲ್ಲಿನ ಎಲ್ಲಾ ಸೀಟುಗಳಿಗೆ ಅನ್ವಯವಾಗತಕ್ಕದ್ದು.

6. **2004-05ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗಾಗಿ ನಿಗದಿಪಡಿಸಿದ ಶುಲ್ಕ.**- 2004-05ನೇ ಶೈಕ್ಷಣಿಕ ವರ್ಷಕ್ಕಾಗಿ ಸರ್ಕಾರಿ ಕೋಟಾ ಮತ್ತು ಆಡಳಿತ ಮಂಡಳಿಯ ಕೋಟಾದಲ್ಲಿಯ ವಿವಿಧ ವೃತ್ತಿ ವ್ಯಾಸಂಗ ಕ್ರಮಗಳಿಗಾಗಿ ಸಂದಾಯಮಾಡತಕ್ಕ ಶುಲ್ಕವು, ಶುಲ್ಕ ನಿರ್ಣಯ ಸಮಿತಿಯು ನಿಗದಿಪಡಿಸಿದ ಶುಲ್ಕವನ್ನು ಮೀರತಕ್ಕದ್ದಲ್ಲ. ಇದು ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗಾಗಿ ನಿಗದಿಪಡಿಸಿದ್ದ ತಾತ್ಕಾಲಿಕ ಶುಲ್ಕವನ್ನೂ ಒಳಗೊಳ್ಳುತ್ತದೆ.

7. **ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳು ಅಸಿಂಧುವಾಗಿರುವುದು.**- 2004-05ನೇ ಶೈಕ್ಷಣಿಕ ವರ್ಷಕ್ಕಾಗಿ ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ಎಲ್ಲಾ ಪ್ರವೇಶಗಳು, ಅವುಗಳನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮಾಡಿರಲಿ ಅಥವಾ ತರುವಾಯ ಮಾಡಿರಲಿ, ಅಸಿಂಧುವಾಗಿರತಕ್ಕದ್ದು.

8. **ದಂಡಗಳು.**- ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ನಿಯಮಗಳು, 2004ರ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನೂ, ಅಪರಾಧ ನಿರ್ಣಯವಾದ ಮೇಲೆ ಮತ್ತು ಯಾವುದೇ ಅಧಿನಿಯಮ ಮತ್ತು ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ದಂಡಗಳಿಗೆ ಪ್ರತಿಕೂಲವಾಗದಂತೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

9. **ಅಪರಾಧಗಳ ಸಂಜ್ಞಾನ.**- ಯಾವುದೇ ನ್ಯಾಯಾಲಯವು, ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಅಧಿಕೃತಗೊಳಿಸಿದ

ಒಬ್ಬ ಅಧಿಕಾರಿಯು ಲಿಖಿತ ದೂರನ್ನು ಸಲ್ಲಿಸಿದ ಹೊರತು, ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**10. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**- ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**11. ತೊಂದರೆಗಳ ನಿವಾರಣೆ.**- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಯಾವುದೇ ಕಾರ್ಯವನ್ನು ಮಾಡಬಹುದು.

**12. ನಿಯಮ ರಚನಾಧಿಕಾರ.**- (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ನಿಯಮಗಳನ್ನು ರಚಿಸಬಹುದು.

(2) 10ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಮತ್ತು ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿದ್ದರೆ ಅಥವಾ ಅದು ಅಧಿವೇಶನದಲ್ಲಿಲ್ಲದಿದ್ದರೆ ನಿಕಟ ತರುವಾಯದ ಅಧಿವೇಶನದಲ್ಲಿ ಒಂದು ಅಥವಾ ಎರಡು ಅಥವಾ ಅದಕ್ಕೂ ಹೆಚ್ಚು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹೀಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ಆದೇಶದಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ಆದೇಶ ಅಥವಾ ನಿಯಮವನ್ನು ರದ್ದುಮಾಡಲು ತೀರ್ಮಾನಿಸಿದರೆ ತದನಂತರ ಆ ನಿಯಮವು ಅಥವಾ ಆದೇಶವು ಆ ಮಾರ್ಪಾಟು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ, ಸಂದರ್ಭಾನುಸಾರ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ರದ್ದಾಗತಕ್ಕದ್ದು. ಹೀಗಿದ್ದರೂ ಹಾಗೆ ಮಾಡಿದ ಯಾವುದೇ ಮಾರ್ಪಾಡು ಅಥವಾ ರದ್ದತಿಯು ಆ ನಿಯಮ ಅಥವಾ ಆದೇಶದ ಅಡಿಯಲ್ಲಿ ಹಿಂದೆ ಮಾಡಿದ ಯಾವ ಕಾರ್ಯದ ಸಿಂಧುತ್ವಕ್ಕೂ ಬಾಧೆ ಉಂಟು ಮಾಡತಕ್ಕದ್ದಲ್ಲ.

**13. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ನಿಯಮಗಳು, 2004ರ ಅನ್ವಯತೆ.**- ಈ ಅಧಿನಿಯಮದ ಅಡಿಯಲ್ಲಿ ಒಳಗೊಳ್ಳದ ಯಾವುದೇ ವಿಷಯದ ಸಂಬಂಧದಲ್ಲಿ, ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ನಿಯಮಗಳು, 2004 ರಲ್ಲಿ ಒಳಗೊಂಡಿರುವ ಉಪಬಂಧಗಳು ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.